2000–01 ಮತ್ತು 2001–02 ನೇ ಸಾಲಿನಲ್ಲಿ ರಸ್ತೆ ನಿರ್ವಹಣೆಗೆ ಬಿಡುಗಡೆಯಾದ ಹಣದ ವಿವರಗಳು ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

| | 2000–01 | 2001–02 | ಒಟ್ಟು |
|---|---|---|---|
| ರಾಜ್ಯ ಹೆದ್ದಾರಿ | 48.58 | 603.71 | 652.29 |
| ಜಿಲ್ಲಾ ಮುಖ್ಯ ರಸ್ತೆಗಳು | 118.91 | 130.39 | 249.30 |

ತಾಲ್ಲೂಕುವಾರು ವಿವರಗಳನ್ನು ಅನುಬಂಧ – 1 ರಲ್ಲಿ ಸಲ್ಲಿಸಿದೆ.

ಆ) 2000–01ನೇ ಸಾಲಿಗೆ ರಾಜ್ಯ ಹೆದ್ದಾರಿ ದುರಸ್ತಿಗೆ ರೂ. 60.65 ಲಕ್ಷ ಹಾಗೂ ಜಿಲ್ಲಾ ಮುಖ್ಯ ರಸ್ತೆಗೆ ರೂ. 125.32 ಲಕ್ಷ ರೂ. ಬಿಡುಗಡೆಯಾಗಿರುತ್ತದೆ ಹಾಗೂ 2001–02ನೇ ಸಾಲಿಗೆ ರಾಜ್ಯ ಹೆದ್ದಾರಿ ದುರಸ್ತಿಗೆ ರೂ. 7.45 ಲಕ್ಷ ಮತ್ತು ಜಿಲ್ಲಾ ಮುಖ್ಯ ರಸ್ತೆ ದುರಸ್ತಿಗೆ ರೂ. 76.29 ಲಕ್ಷ ಬಿಡುಗಡೆಯಾಗಿರುತ್ತದೆ.

**ಅನುಬಂಧ**

ಚಿಕ್ಕಮಗಳೂರು ಜಿಲ್ಲೆಯಲ್ಲಿ 2000–01 ಮತ್ತು 2001–02ನೇ ಸಾಲಿನಲ್ಲಿ ರಸ್ತೆ ನಿರ್ವಹಣೆಗೆ ಬಿಡುಗಡೆಯಾಗಿರುವ ಹಣದ ತಾಲ್ಲೂಕುವಾರು ವಿವರ

| ತಾಲ್ಲೂಕು | 2000–01 | | 2001–02 | | ಒಟ್ಟು | |
|---|---|---|---|---|---|---|
| | ರಾಜ್ಯ ಹೆದ್ದಾರಿ | ಜಿಲ್ಲಾ ಮುಖ್ಯ ರಸ್ತೆಗಳು | ರಾಜ್ಯ ಹೆದ್ದಾರಿ | ಜಿಲ್ಲಾ ಮುಖ್ಯ ರಸ್ತೆಗಳು | ರಾಜ್ಯ ಹೆದ್ದಾರಿ | ಜಿಲ್ಲಾ ಮುಖ್ಯ ರಸ್ತೆಗಳು |
| ಚಿಕ್ಕಮಗಳೂರು | 16.40 | 28.14 | 155.19 | 39.66 | 171.59 | 67.80 |
| ತರೀಕೆರೆ | 1.24 | 8.62 | 26.54 | 15.26 | 27.78 | 23.88 |
| ಮೂಡಿಗೆರೆ | 22.44 | 15.00 | 417.98 | 19.76 | 440.42 | 34.76 |
| ಕೊಪ್ಪ | -- | 10.32 | -- | 5.75 | -- | 16.07 |
| ಶೃಂಗೇರಿ | -- | 13.22 | -- | 6.35 | -- | 19.57 |
| ನರಸಿಂಹರಾಜಪುರ | -- | 12.51 | -- | 6.23 | -- | 18.74 |
| ಕಡೂರು | 8.50 | 31.10 | 4.00 | 37.38 | 12.50 | 68.48 |
| ಒಟ್ಟು | 48.58 | 118.91 | 603.71 | 130.39 | 652.29 | 249.30 |

**ಆರ್.ಎಫ್.ಓ., ವಿ.ಸಿ.ಎಫ್ ಮತ್ತು ಡಿ.ಎಫ್.ಓ.ಗಳ ವರ್ಗಾವಣೆ**

3439(4980) ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೇರೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅರಣ್ಯ ಇಲಾಖೆಯು ಈ ಸಾಲಿನಲ್ಲಿ ಎಷ್ಟು ಜನ ಆರ್.ಎಫ್.ಓ., ಎ.ಸಿ.ಎಫ್ ಗಳ ಹಾಗೂ ಡಿ.ಎಫ್.ಓ.ಗಳ ವರ್ಗ ಮಾಡಲಾಗಿದೆ ;

ಆ) ಎಷ್ಟು ಜನ ಅಧಿಕಾರಿಗಳನ್ನು ಅವಧಿ ಪೂರ್ಣ ಹಾಗೂ ಅವಧಿ ನಂತರ ವರ್ಗ ಮಾಡಲಾಗಿದೆ ;

ಇ) ಮೇಲಿನ ಅಧಿಕಾರಿಗಳ ಬಗ್ಗೆ ವರ್ಗಾವಣೆ ಮಾಡಲು ಎಷ್ಟು ಶಾಸಕರು ಶಿಫಾರಸ್ಸು ಪತ್ರಗಳನ್ನು ನೀಡಿರುತ್ತಾರೆ, ಇದರಲ್ಲಿ ಎಷ್ಟು ಪತ್ರಗಳನ್ನು ಮಾನ್ಯ ಮಾಡಲಾಗಿದೆ ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಅರಣ್ಯ ಇಲಾಖೆಯಲ್ಲಿ 2000 ರ ಸಾರ್ವತ್ರಿಕ ವರ್ಗಾವಣೆಯಲ್ಲಿ ಈ ಕೆಳಕಂಡ ವೃಂದಗಳಲ್ಲಿ ವರ್ಗಾವಣೆ ಮಾಡಿದ ಸಂಖ್ಯೆ ಅವುಗಳ ಮುಂದೆ ತೋರಿಸಲಾಗಿದೆ.

| | |
|---|---|
| ಉಪ ಅರಣ್ಯ ಸಂಕ್ಷಣಾಧಿಕಾರಿ (ರಾಜ್ಯ ಅರಣ್ಯ ಸೇವೆ) | 18 |
| ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ರಾಜ್ಯ ಅರಣ್ಯ ಸೇವೆ) | 123 |
| ವಲಯ ಅರಣ್ಯ ಅಧಿಕಾರಿ | 204 |

ಆ) ಮೇಲಿನಂತೆ

ಇ) ಈ ಸಾಲಿನ ಸಾರ್ವತ್ರಿಕ ವರ್ಗಾವಣೆಯಲ್ಲಿ ಮೇಲಿನ ವೃಂದಗಳಿಗೆ ವರ್ಗಾವಣೆಗೆ ಕುರಿತು 143 ಶಾಸಕರುಗಳು ಶಿಫಾರಸ್ಸು ಪತ್ರಗಳನ್ನು ನೀಡಿರುತ್ತಾರೆ. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳ ನಿಯಮ 26 ರನ್ವಯ ಇವುಗಳನ್ನು ಮಾನ್ಯ ಮಾಡಲು ಆಸ್ಪದವಿರುವುದಿಲ್ಲ.

**ರಾಜ್ಯದಲ್ಲಿ ಜಲ ಹಾಗೂ ವಾಯು ಮಾಲಿನ್ಯ ತಡೆಗಟ್ಟುವುದು**

4340(4990) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಜಲ ಹಾಗೂ ವಾಯು ಮಾಲಿನ್ಯ ಮಾಡುವ ಬೃಹತ್ ಉದ್ಯಮಗಳು ಯಾವುವು :

ಆ) ಈ ಉದ್ದಿಮೆಗಳು ಜನ ಜೀವನದ ಮೇಲೆ ಆಗಾಧ ಪರಿಣಾಮ ಬೀರದಂತೆ ಜಲ ಹಾಗೂ ವಾಯು ಮಾಲಿನ್ಯ ಮಾಡದಿರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು :

ಇ) ಗದಗ ಹಾಗೂ ಮುಂಡರಗಿ ತಾಲ್ಲೂಕಿನ ದೊಡ್ಡ ಪ್ರಮಾಣದ ಜನ ಸಂಖ್ಯೆಗೆ ಕುಡಿಯುವ ನೀರು ಒದಗಿಸುವ ತುಂಗಭದ್ರಾ ನದಿಯ ನೀರನ್ನು ಮಲಿನ ಮಾಡುವ ಉದ್ಯಮಗಳು ಯಾವುವು :

ಈ) ಈ ಜಲ ಹಾಗೂ ವಾಯು ಮಾಲಿನ್ಯ ತಡೆಗಟ್ಟಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಉ) ಇನ್ನಾದರೂ ಈ ಜಲ ಹಾಗೂ ವಾಯು ಮಾಲಿನ್ಯ ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಅಲ್ಯೂಮಿನಿಯಂ, ರಸಗೊಬ್ಬರ, ಸಕ್ಕರೆ, ಕಬ್ಬಿಣ ಮತ್ತು ಉಕ್ಕು, ರಿಫೈನರಿ, ಫಾರ್ಮಸಿಟಿಕಲ್, ಸಿಮೆಂಟ್, ಪಲ್ಪಿ ಮತ್ತು ಕಾಗದ, ರಾಸಾಯನಿಕ ವಸ್ತು ತಯಾರು ಮಾಡುವ ಕಾರ್ಖಾನೆಗಳು ಹಾಗೂ ಡಿಸ್ಟಿಲರಿಗಳು, ಶಾಖೋತ್ಪನ್ನ ಘಟಕಗಳು ರಾಜ್ಯದಲ್ಲಿ ಮಾಲಿನ್ಯ ಮಾಡತಕ್ಕಂಥ ಬೃಹತ್ ಉದ್ಯಮಗಳಾಗಿವೆ.

ಆ) ಈ ಉದ್ದಿಮೆಗಳು ಜಲ ಮತ್ತು ವಾಯು ಮಾಲಿನ್ಯ ಮಾಡದಿರಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೆಳಗಿನ ಕ್ರಮಗಳನ್ನು ಕೈಗೊಂಡಿದೆ.

ಉದ್ದಿಮೆಗಳಿಂದ ಹೊರಬರುವ ಕಲುಷಿತ ನೀರನ್ನು ಹಾಗೂ ವಾಯು ಮಾಲಿನ್ಯ ಕಾರಕಗಳನ್ನು ಮಂಡಳಿಯು ನಿಗಧಿಪಡಿಸಿರುವ ಗುಣ ಮಾನಕಕ್ಕೆ ಶುದ್ದೀಕರಿಸಲು